ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರ: 1828/2014

ಚಾಸಾ: 9 ಪ್ರಾಸಾ:7

ದಿನಾಂಕ: 29.03.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಡಾ. ವಿಜಯ ಶಂಕರ |
| ತಂದೆಯ ಹೆಸರು | : | ರಾಮಮೂರ್ತಿ ಉಪಾಧ್ಯ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸ.ಸ.ಅ.ರವರಿಂದ:**

ನಾನು ಕಳೆದ 18 ವರ್ಷಗಳಿಂದ ಕುಂದಾಪುರದ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 08-05-2014 ರಂದು ಚಾಸಾ-1ರವರು ಮಧ್ಯಾಹ್ನ 2-30ಕ್ಕೆ ಹಲ್ಲೆಯ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು ಅವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯ ಕಂಡು ಬಂದಿರುತ್ತದೆ.

1. ಬಲಮೊಣಕೈಯಲ್ಲಿ ಊತ ಕಂಡು ಬಂದಿದ್ದು, ಎಕ್ಸರೇಯಲ್ಲಿ ಮೂಳೆ ಮುರಿದಿರುವುದು ಕಂಡು ಬಂದಿರುತ್ತದೆ.

2. ಎಡಕೈಯಲ್ಲಿ 2x2c.m ನ ತರುಚಿದ ಗಾಯ

3. ತಲೆಯಲ್ಲಿ 3x4c.m ನ ಗಾಯ ರಕ್ತ ಹೆಪ್ಪುಗಟ್ಟಿರುತ್ತದೆ.

ಸದ್ರಿ ಗಾಯಗಳಲ್ಲಿ 1ನೇ ಗಾಯದ್ದು ತೀವ್ರ ಸ್ವರೂಪಾದ್ದು, ಉಳಿದಿದ್ದು ಸಾಮಾನ್ಯ ಸ್ವರೂಪದ್ದಾಗಿರುತ್ತದೆ.

ಚಾಸಾ-2 ರವರು ಅದೇ ರೀತಿ ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು ಅವರನ್ನು ಪರಿಕ್ಷೀಸಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. ಬೆನ್ನಿನ ಎಡ ಭಾಗದಲ್ಲಿ 2x2 c.m ನ ತರುಚಿದ ಗಾಯ

2. ಎಡಕೈಯಲ್ಲಿ 2x2 c.m ನ ತರುಚಿದ ಗಾಯ

3. ತಲೆಯಲ್ಲಿ 3x3 c.m ನ ರಕ್ತ ಹೆಪ್ಪುಗಟ್ಟಿರುವುದು ಕಂಡು ಬಂದಿರುತ್ತದೆ.

ಸದ್ರಿ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿರುತ್ತದೆ.

ಚಾಸಾ-3 ರವರು ಅದೇ ರೀತಿ ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು ಅವರನ್ನು ಪರಿಕ್ಷೀಸಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. ಬಲಕೈಯಲ್ಲಿ 3x2 c.m ನ ತರುಚಿದ ಗಾಯ ಕಂಡು ಬಂದಿರುತ್ತದೆ.

ಮೇಲೆ ಹೇಳಿದ ಗಾಯ ಸಾಮಾನ್ಯ ಸ್ವರೂಪಾದ್ದಾಗಿರುತ್ತದೆ.

ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರಗಳನ್ನು ನೀಡಿರುತ್ತೇನೆ. ಸದ್ರಿ ದಾಖಲೆಗಳನ್ನು ನಿಪಿ-5 ರಿಂದ 7 ಎಂದು ಅದರಲ್ಲಿನ ಸಾಕ್ಷಿ ಸಹಿಯನ್ನು ನಿಪಿ-5(ಎ) ರಿಂದ 7(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಬಿ. ಆರ್.ಎನ್ ರವರಿಂದಃ</u>**

ಹಲ್ಲೆಯ ಕಾರಣವಾದ ಯಾವುದೇ ಆಯುಧವನ್ನು ಹಾಜರುಪಡಿಸಿ ಅಭಿಪ್ರಾಯ ಪಡೆದಿಲ್ಲ. ಸದ್ರಿ ಆಯುಧದ ಯಾವುದೇ ಚಹರೆಗಳ ವಿವರಣೆ ನೀಡಿರುವುದಿಲ್ಲ. ಪ್ರಾಸಾ-1ರವರು ವಯಸ್ಸಾಗಿರುವ ಮಹಿಳೆಯಾಗಿದ್ದು ಆಯಾ ತಪ್ಪಿ ಬಿದ್ದರೆ ನಿಪಿ-5 ರಲ್ಲಿ ನಮೂದಿಸಿರುವ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸರಿ. ಅದರಲ್ಲಿ ನಮೂದಿಸಿರುವ 2ನೇ ಗಾಯ ದೊಡ್ಡ ಆಯುಧದಿಂದ ಆಗುವ ಸಾಧ್ಯತೆ ಇಲ್ಲ ಎಂದರೆ ತಾಗಿದರೆ ಆಗಬಹುದು ಎಂದು ನುಡಿಯುತ್ತಾರೆ.

ನಿಪಿ-6ರಲ್ಲಿ ನಮೂದಿಸಿರುವ ಗಾಯಗಳು ಚಾಸಾ-2ರವರಿಗೆ ಕೆಲಸ ಮಾಡುವಾಗ ಅಜಾಗರೂಕತೆಯಿಂದ ಬಿದ್ದಾಗ ಆಗುವ ಸಾಧ್ಯತೆ ಇರಬಹುದು. ಆತನ ಗಾಯಗಳ ಬಗ್ಗೆ ಯಾವುದೇ ಆಯುಧವನ್ನು ಹಾಜರುಪಡಿಸಿ ಅಭಿಪ್ರಾಯ ಪಡೆದಿಲ್ಲ.

ನಿಪಿ-7ರಲ್ಲಿ ನಮೂದಿಸಿರುವ ಗಾಯಗಳು ಚಾಸಾ-3ರವರಿಗೆ ದೈನಂದಿನ ಕೆಲಸದಲ್ಲಿ ಅಜಾಗರೂಕತೆಯಿಂದ ಆಗಿರುವ ಸಾಧ್ಯತೆ ಇದೆ ಎಂದರೆ ಸರಿ.

ನಿಪಿ-5 ರಲ್ಲಿ ಚಾಸಾ-1ರವರ ಗಾಯದ ವಯಸ್ಸು ಕಂಡು ಬರುವುದಿಲ್ಲ ಎಂದರೆ ಸರಿ. ಸ್ವಲ್ಪ ದಿನಗಳ ಮುಂಚೆ ಆದ ಗಾಯಗಳನ್ನು ತೋರಿಸಿ ಪ್ರಮಾಣ ಪತ್ರ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆಕೆಗೆ ಸಂಪೂರ್ಣ ಚಿಕಿತ್ಸೆಯನ್ನು ನಮ್ಮ ಆಸ್ಪತ್ರೆಯಲ್ಲಿ ನೀಡಿರುವುದಿಲ್ಲ. ಪ್ರಾಥಮಿಕ ಚಿಕಿತ್ಸೆಯನ್ನು ನೀಡಿದ್ದು ಮುಂದಿನ ಚಿಕಿತ್ಸೆಯ ಬಗ್ಗೆ ನನಗೆ ಮಾಹಿತಿ ಇಲ್ಲ. ಕಡತಗಳ ಪ್ರಕಾರ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ ಕಳುಹಿಸಲಾಗಿದೆ ಎಂದು ಕಂಡು ಬರುತ್ತದೆ. ಆ ಬಗ್ಗೆ ನಿಪಿ-5 ರಲ್ಲಿ ನಮೂದಿಸಿಲ್ಲ. ಪ್ರಾಸಾ-1ರವರ ಗಾಯಗಳಿಗೆ ಸಂಬಂಧಿಸಿದಂತೆ ನಿಪಿ-5ನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಗಳನ್ನು ಪೊಲೀಸರು ನಮ್ಮಿಂದ ಪಡೆದಿಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**